‘ಫ್ರೆಂಡು ಕಥೆಯ ವಿಮರ್ಶೆಯನ್ನು ಪಕ್ಕಕ್ಕಿಡು, ಈಗ ಹೇಳು, ಈ ಕಥೆಯಲ್ಲಿ ನನ್ನ ಮೂಗು ಎಲ್ಲಿ?’

‘ಇಂತಹ ಕಥೆಯಲ್ಲೂ ನಿನ್ನ ಮೂಗನ್ನು ಹುಡುಕುತ್ತಿರುವೆಯಲ್ಲ, ನೀನೆಂತವನು?’

‘ಇದೇನು ನಿಜವೇ?’

‘ನೀನೇ ಊಹಿಸಿಕೊಂಡದ್ದು. ಊಹೆಗೆ ನಿಜದ ಬೆನ್ನು ಇರುತ್ತದೆ. ಕಥೆಗಳಂತೆ ಎಷ್ಟು ನಡೆದಿಲ್ಲ, ನಡೀತಿಲ್ಲ ವಾಸ್ತವದ ಬದುಕಿನಲ್ಲಿ ಮೊನ್ನೆ ಕ್ರಾಂತಿಕಾರಿ ಪ್ರೊಫೆಸರ್ ದಳವಾಯಿ ಅವರು ಸಿಕ್ಕಾಗ, ಜಂಗಮರ ಹೆಣ್ಣನ್ನು ನಾಯಕರ ಹುಡುಗ ಮದುವೆ ಆಗಿ, ಅವರಿಗೆ ಒಬ್ಬ ಮಗ ಹುಟ್ಟಿ ಹತ್ತುವರ್ಷಗಳು ಆದಮೇಲೆ, ಮಗನಿಂದಲೇ ತನ್ನ ಅಪ್ಪನನ್ನು ವಿಷವಿಕ್ಕಿಸಿ ಕೊಲ್ಲಿಸಿದ್ದ ಇಂತಹದ್ದೇ ಒಂದು ಕಥೆಯನ್ನು ಹೇಳಿರಲಿಲ್ಲವೇ, ಎಂದು ಅವನ ಸ್ನೇಹಿತ ಹೇಳಿದ. ಮುಂದುವರೆದು, ‘ಕವಿಗಳನ್ನು, ಕಲಾವಿದರನ್ನು, ಕಥೆಗಾರರನ್ನು ಎರಡನೇ ದೇವರು ಎಂದು ಇದಕ್ಕೆ ಕರೆಯುವುದು. ಇರುವುದನ್ನು ಅರಿಯಲು, ಅಥವಾ ಹೇಳಲು ಇಲ್ಲದ್ದನ್ನು ಸೃಷ್ಟಿಮಾಡಿಯೇ ಹೇಳಬೇಕಲ್ಲ!’

‘ಸರಿ, ಕಥೆಗೆ ಮೂಗಿನ ಚಿತ್ರವನ್ನು ಕಲಾವಿದ ಏಕೆ ಬಿಡಿಸಿದ?’

‘ಅದೂ ನಿನ್ನ ಊಹೆಯೇ! ನಿನ್ನ ಮೂಗೇ ಆ ಮೂಗನ್ನು ಚಿತ್ರದಲ್ಲಿ ಬರುವಂತೆ ಮಾಡಿದೆ’.

‘ಕಲೆಯಲ್ಲಿ ಅಥವಾ ಕಥೆಯಲ್ಲಿ ಒಪ್ಪುವುದನ್ನು ವಾಸ್ತವದಲ್ಲಿ ಏಕೆ ಒಪ್ಪಿ ಕೊಳ್ಳಲು ಆಗುತ್ತಿಲ್ಲ. ನಿನ್ನ ಮೂಗನ್ನೇ ನೀನು ಇಷ್ಟೊಂದು ಅಸಹ್ಯ ಪಡುತ್ತಿರುವೆಯಲ್ಲ, ನಿನಗೆ ಏನೆನ್ನಬೇಕು?’

ಇಬ್ಬರು ತಾವು ಕೂತುಕೊಂಡಿದ್ದಲ್ಲಿಂದ ಇಳಿದು ನಡೆದು ಬರುತ್ತಿದ್ದರು. ರಸ್ತೆಯ ಪಕ್ಕದಲ್ಲಿ ಒಬ್ಬ ಹುಚ್ಚ. ಅವನು ತನ್ನ ಕಣ್ಣುಗಳಿಗೆ ಕಪ್ಪು ಬಟ್ಟೆಯೊಂದನ್ನು ಕಟ್ಟಿಕೊಂಡಿದ್ದಾನೆ. ಅವನ ಇಡೀ ದೇಹದಲ್ಲಿ ಕಣ್ಣಿಗೆ ಕಟ್ಟಿಕೊಂಡಿರುವ ವಸ್ತ್ರವನ್ನು ಹೊರತು ಪಡಿಸಿದರೆ ಅವನ ಮೈಯ ಮೇಲೆ ಎಲ್ಲೆಲ್ಲೂ ಒಂದು ತುಂಡು ಬಟ್ಟೆ ಇಲ್ಲ. ಕೊರಳಿಗೆ ಫಿಲಿಪ್ಸ್ ರೇಡಿಯೋವೊಂದನ್ನು ನೇತು ಹಾಕಿಕೊಂಡಿರುವವನು. ರೇಡಿಯೋದಲ್ಲಿ ಕಾಮೆಂಟರಿ ಬರುತ್ತಿದೆ. ಕೂಗುತ್ತಿದ್ದಾನೆ. ತೊಂಬತ್ತೇಳು ರನ್ನುಗಳಾಗಿದ್ದಾಗಲೇ ಅವರನ್ನು ಕಟ್ಟಿ ಹಾಕಬೇಕಿತ್ತು. ಇಷ್ಟೊಂದು ರನ್ನುಗಳನ್ನು ಹೊಡೆಯುವ ತನಕ ಯಾಕೆ



ಬಿಡಬೇಕಿತ್ತು. ಕಳಪೆ ಬೌಲಿಂಗ್. ಏಳು ವಿಕೆಟ್‌ಗಳನ್ನು ತೆಗೆಯುವತನಕ ತುಂಬ ಟೈಟಾಗಿ ಆಡಿ, ಆಮೇಲೆ ಅತಿ ಕಳಪೆ. ಅಸ್ಸಿಗಳದೇನು ಸಾಧನೆ ಇಲ್ಲ, ಪಠಾಣ್ರು ಹೀಗೆ ಆಡಿದ್ದಿದ್ದರಿಂದಲೇ ಅಸ್ಸಿಗಳು ಗೆದ್ದದ್ದು. ಕೂಗಿ ಜೋರಾಗಿ ರೇಡಿಯೋವನ್ನು ದೇವಸ್ಥಾನದ ಮುಂದೆ ಈಡುಗಾಯಿ ಒಡೆಯುವಂತೆ ನೆಲಕ್ಕೆ ರಪ್ಪಂಥ ಒಗೆದ. ಅದು ಕ್ಷಣದಲ್ಲೇ ಚೂರು ಚೂರಾಯಿತು. ಅದರ ಕೆಲವು ಚೂರುಗಳು ಇವರಿಬ್ಬರ ಮುಖಗಳಿಗೂ ತಾಗಿದವು. ಕತ್ತಲು ಸಂಪೂರ್ಣ ಆವರಿಸಿಕೊಂಡಿತ್ತು. ಕಪ್ಪು ಮೂಗಿನವನು ‘ಹೇ ಹುಚ್ಚು ಸೂಳೆಮಗನೆ’ ಎಂದು ಬೈದ. ಅದಕ್ಕೆ ತಕ್ಷಣಕ್ಕೆ ಅವನು, ‘ನೀನು ಹುಚ್ಚ, ನಿನ್ನ ಪಕ್ಕದಲ್ಲಿ ಇದ್ದಾನಲ್ಲ ಅವನು ಹುಚ್ಚ. ನಿಮ್ಮ ಮನೆಯಲ್ಲಿ ಇರುವವರೆಲ್ಲರೂ ಹುಚ್ಚರು. ಅವನ ಮನೆಯಲ್ಲಿ ಇರುವವರೆಲ್ಲರೂ ಹುಚ್ಚರು. ಈ ಲೋಕನೇ ಹುಚ್ಚು. ಲೋ, ನಿನ್ನ ಮೂಗು ನೋಡ್ಕೋ ಹೆಂಗಿದೆ’ ಅಂದ ಅವರ ಕಡೆ ತಿರುಗಿ, ನೋಡುತ್ತ.